


# ಅಂಚೆಯಲ್ಲಿ ಮೈಸೂರು ವೈಭವ

■ ಎನ್. ಜಗನ್ನಾಥ ಪ್ರಕಾಶ್

ಅಂಚೆ ವ್ಯವಸ್ಥೆ ಕೇವಲ ಸಂದೇಶವಾಹಕ ಏರ್ಪಾಡು ಮಾತ್ರವಲ್ಲ, ಅಂಚೆ ದಸ್ತಾವೇಜುಗಳು ಆಯಾ ಸ್ಥಳದ ಚರಿತ್ರೆಯ ವಾಹಕಗಳೂ ಹೌದು. ಅಂಚೆ ಚೀಟಿ, ಅಂಚೆ ಲಕೋಟೆ, ಅಂಚೆ ಮೊಹರು ಇತ್ಯಾದಿ ಅಂಚೆ ದಸ್ತಾವೇಜುಗಳು ಆಯಾ ದೇಶದ, ಆಯಾ ಜಾಗಗಳ ಇತಿಹಾಸವನ್ನು ಅನಾವರಣಗೊಳಿಸುವ ಕಾರ್ಯವನ್ನು ಮಾಡುತ್ತವೆ.

ಹಾಗೆಯೇ ಮೈಸೂರಿನ ಹಿರಿಮೆ– ವೈಭವವನ್ನು ಸಾರುವ ಅಂಚೆ ಚೀಟಿಗಳು ಕೂಡ ಗಮನಸೆಳೆಯುವಂತಿವೆ. ಮೈಸೂರು ಸಂಸ್ಥಾನದ ರಾಜಧಾನಿಯಾಗಿದ್ದ ನಗರ, ನಮ್ಮ ಹೆಮ್ಮೆಯ ಸಾಂಸ್ಕೃತಿಕ ನಗರ, ಕೆಲವು ಆಕರ್ಷಕ ಕಟ್ಟಡಗಳು, ನಯನ ಮನೋಹರ ಉದ್ಯಾನಗಳ ಗುಚ್ಛ ಮಾತ್ರವಲ್ಲ ಸಮಸ್ತ ಸಂಸ್ಕೃತಿಯನ್ನು ತುಂಬಿಕೊಂಡ ಜೀವಂತ ತಾಣವೂ ಹೌದು.

ಶ್ರೀಮಂತ ಇತಿಹಾಸವಿರುವ, ಹತ್ತು ಹಲವು ವಿಷಯ ವಿಶೇಷಗಳನ್ನು ತನ್ನಲ್ಲಿ ಕಾಪಿಟ್ಟುಕೊಂಡ ನಗರ ಮೈಸೂರು. ದಸರೆ ಆಚರಣೆಯಿಂದ ವಿಶ್ವ ವಿಖ್ಯಾತವಾಗಿರುವ ಮೈಸೂರು ವರ್ಷದುದ್ದಕ್ಕೂ ಪ್ರವಾಸಿಗರನ್ನು, ಇತಿಹಾಸ ಆಸಕ್ತರನ್ನು ಸೆಳೆಯುವ ಸ್ಥಳ.

ಶತಮಾನಗಳ ಹಿಂದೆಯೇ 'ಮೈಸೂರು ಅಂಚೆ' ಯಂತಹ ಅತ್ಯುತ್ತಮ ಅಂಚೆ ವ್ಯವಸ್ಥೆಯನ್ನು ಹೊಂದಿದ್ದ ಮೈಸೂರು ಪರಂಪರೆಯನ್ನು ಭಾರತೀಯ ಅಂಚೆ ಇಲಾಖೆ ತನ್ನ ದಸ್ತಾವೇಜುಗಳಲ್ಲಿ ಪ್ರತಿಬಿಂಬಿಸುತ್ತಲೇ ಬರುತ್ತಿದೆ. ಭಾರತೀಯ ಅಂಚೆ ಇಲಾಖೆ ಅಂಚೆ ಚೀಟಿ, ವಿಶೇಷ ಅಂಚೆ ಲಕೋಟೆಗಳಲ್ಲಿ ಮೈಸೂರಿನ ವೈವಿಧ್ಯಗಳನ್ನು ಚಿತ್ರ ಮಾಹಿತಿಗಳ ಮುಖೇನ ಪರಿಚಯ ಮಾಡಿಸುವ ಕೆಲಸದಲ್ಲಿ ನಿರತವಾಗಿದೆ.

ಮೈಸೂರು ಅರಮನೆ, ಮೈಸೂರು ಸ್ಯಾಂಡಲ್, ಗಂಧದೆಣ್ಣೆ, ಸಾಬೂನು, ಘಮಘಮಿಸುವ ಮೈಸೂರು ಮಲ್ಲಿಗೆ, ಬಾಯಲ್ಲಿ ನಿರೂರಿಸುವ ಮೈಸೂರು ಪಾಕು, ಕಣ್ಮನ ಸೆಳೆವ ಬೃಂದಾವನ ಉದ್ಯಾನ... ಹೀಗೆ ಮೈಸೂರಿನ ವೈವಿಧ್ಯಗಳನ್ನು ಬಿಂಬಿಸುವ ಐವತ್ತಕ್ಕೂ ಹೆಚ್ಚು ಅಂಚೆ ಲಕೋಟೆಗಳನ್ನು ಹೊತ್ತು ತಂದಿದೆ.

ರಾಷ್ಟ್ರೀಯ ಭೌಗೋಳಿಕ ಸೂಚಿಯಲ್ಲಿ ದಾಖಲಾಗಿರುವ ಮೈಸೂರಿನ ಬಹುತೇಕ ಎಲ್ಲಾ ವಿಶೇಷಗಳನ್ನು ಅಂಚೆ ದಸ್ತಾವೇಜುಗಳಲ್ಲಿ ದಾಖಲು ಮಾಡಲಾಗಿದ್ದು, ದಸರಾ ಗೊಂಬೆ, ಫಿಲೋಮಿನಾ ಚರ್ಚ್, ಚಾಮುಂಡಿ ಬೆಟ್ಟದ ನಂದಿ ವಿಗ್ರಹ, ಪಂಜಿನ ಕವಾಯಿತು, ಆಕರ್ಷಕ ಗಜಪಡೆ, ಹಾಲು ಬಣ್ಣದ ಲಲಿತಮಹಲ್, ವಜ್ರಖಚಿತ ಸಿಂಹಾಸನ, ಮನಮೋಹಕ ಮೈಸೂರು ಚಿತ್ರಕಲೆ, ಹೀಗೆ ಅಂಚೆಯಲ್ಲಿ ಅನಾವರಣಗೊಂಡ ಮೈಸೂರು ವಿಶೇಷಗಳ ಪಟ್ಟಿ ಈಗಲೂ ಬರುವುದು ನಿಂತಿಲ್ಲ. ಒಂದು ಶತಮಾನವನ್ನು ಕಂಡ ಮೈಸೂರು ವೈದ್ಯಕೀಯ ಕಾಲೇಜು ಭಾರತೀಯ ಅಂಚೆ ಚೀಟಿಗಳ ಯಾದಿಯಲ್ಲಿ ಈಚಿನ ಸೇರ್ಪಡೆ.

ಕಾಲ ಕಾಲಕ್ಕೆ ಅನೇಕ ವಿಶೇಷಗಳು ಅಂಚೆ ದಸ್ತಾವೇಜುಗಳಲ್ಲಿ ಬೆಳಕು ಕಾಣುತ್ತಿದ್ದು, ಅದೊಂದು ಮುಗಿಯಲಾರದ ಆಕರ್ಷಣೆ. ■



















